


# ಮಹಾಂತ ವಾಣಿ

MAHANTHA VANI



ಸಂಪುಟ : 12 ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ತ್ರೈಮಾಸಿಕ ಪತ್ರಿಕೆ ಸಂಚಿಕೆ : 03

ಖಾಸಗಿ ಪ್ರಸಾರಕ್ಕಾಗಿ ಮಾತ್ರ ದಿನಾಂಕ : 20 - 12 - 2024

## 2024-25 ನೇ ಸಾಲಿನ ಶೈಕ್ಷಣಿಕ ಒಕ್ಕೂಟದ ಉದ್ಘಾಟನೆ.



ರಾಯಾಪುರದಲ್ಲಿರುವ ಎಸ್. ಜೆ .ಎಂ.ವಿ.ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ 2024 25 ನೇ ಶೈಕ್ಷಣಿಕ ಸಾಲಿನ ವಿಧ್ಯಾರ್ಥಿ ಒಕ್ಕೂಟದ ಉದ್ಘಾಟನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಾಹಿತಿಗಳು ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಡಾ.ಸಂಗಮನಾಥ ಲೋಕಾಪುರರವರು ಮಾತನಾಡುತ್ತಾ,ನಿಮ್ಮ ಜೀವನದ ನಿರ್ಮಾಪಕರು ನೀವೇ,ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರವನ್ನೂ ಪಾಲಿಸುವಂತವರಾಗಿ.ನಿಮ್ಮ, ನಿಮ್ಮ ಜೀವನದ ಪ್ರಮುಖ ಪಾತ್ರದಾರಿಗಳು ನೀವು. ಶ್ರಮ ಸಂಸ್ಕೃತಿಯ ಯನ್ನೂ ಬೆಳೆಸಿಕೊಳ್ಳಿ.ಜೀವನದ ಅನುಭವ ಪಾಠ ಕಲಿಸುತ್ತದೆ.ಅಭಿಮಾನಕ್ಕಿಂತ ಅಭಿವೃದ್ಧಿ ದೊಡ್ಡದು.ತಮಗೆ ಸಿಕ್ಕಂತಹ ಸವಲತ್ತುಗಳನ್ನು ಹಾಗೂ ಅವಕಾಶಗಳ ಸದುಪಯೋಗ ಪಡೆದುಕೊಳ್ಳಿ ಎಂದರು.ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಶಾಂತಯ್ಯ ಕೆ.ಏಸ್.ಅವರು ಮಹಾವಿದ್ಯಾಲಯದ ವಿಧ್ಯಾರ್ಥಿ ಒಕ್ಕೂಟದ ಶೈಕ್ಷಣಿಕ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುತ್ತವೆ.ಅವರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುತ್ತವೆ.ತಮ್ಮ ತಮ್ಮ ಬದುಕನ್ನು ಕಟ್ಟಿಕೋಳ್ಳುವತ್ತ ಗಮನ ಹರಿಸಿ. ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುವ ಮೂಲಕ ,ತಮ್ಮಲ್ಲಿರುವ ಪ್ರತಿಭೆಯನ್ನು ಗುರುತಿಸಿ , ಅಧ್ಯಯನದ ಹಂತದಲ್ಲಿ ಗುರಿಯೊಂದಿಗೆ ಮುನ್ನುಗ್ಗಿ ಬದುಕನ್ನು ಕಟ್ಟಿಕೊಳ್ಳಿ ಎಂದರು. ಆರಂಭದಲ್ಲಿ ವಿದ್ಯಾರ್ಥಿಗಳಾದ ಸಂಗೀತಾ ಹಾಗೂ ವಿಜಯಲಕ್ಷ್ಮಿ ಪ್ರಾರ್ಥಿಸಿದರು.ವಿಧ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷರಾದ ಡಾ. ಪುಷ್ಪಾ ಬಸನಗೌಡರ ಸರ್ವರನ್ನು ಸ್ವಾಗತಿಸಿದರು. ಐ. ಕ್ಯೂ. ಎ. ಸಿ ಸಂಯೋಜಕರಾದ ಪ್ರೊ ಸಿ. ಕೆ.ಹುಬ್ಬಳ್ಳಿ ಯವರು ಪ್ರಸಕ್ತ ಸಾಲಿನ ವಿಧ್ಯಾರ್ಥಿ ಒಕ್ಕೂಟದ ವಿವಿಧ ಸಂಘಗಳ ಪ್ರಾಧ್ಯಾಪಕ ಸಂಯೋಜಕರು ಹಾಗೂ ವಿಧ್ಯಾರ್ಥಿ ಪದಾಧಿಕಾರಿಗಳನ್ನು ಪರಿಚಯಿಸುವುದರ ಮೂಲಕ, ವಿಧ್ಯಾರ್ಥಿ ಒಕ್ಕೂಟದ ಆಶಯಗಳನ್ನು ವಿವರಿಸಿದರು.ಇದೇ ಸಂದರ್ಭದಲ್ಲಿ ರಾಜ್ಯಶಾಸ್ತ್ರ ವಿಷಯದಲ್ಲಿ 2022 ನೇಯ ಸಾಲಿನಲ್ಲಿ ಹೆಚ್ಚು ಅಂಕ ಗಳಿಸಿದ ವಿಧ್ಯಾರ್ಥಿನಿ ನಾಗಮ್ಮ ನರಿಯವರ್ ಅವರನ್ನು ಗೌರವಿಸಲಾಯಿತು . ವೇದಿಕೆಯಲ್ಲಿ ವಿಧ್ಯಾರ್ಥಿ ಪ್ರದಾನ ಕಾರ್ಯದರ್ಶಿಗಳಾದ ಅಪೂರ್ವ ತಳವಾರ ಕಾರ್ಯಕ್ರಮ ನಿರೂಪಿಸಿದರುಹಾಗೂ ಸುಚಿತ್ರಾ ಕೆಲಗೇರಿ ಉಪಸ್ಥಿತರಿದ್ದರು . ಪ್ರೊ.ಜಯಲಕ್ಷ್ಮಿ ಎಂಡಿಗೇರಿ ವಂದಿಸಿದರು. ಪ್ರೊ. ಕೆ. ಎಸ್ ಮೇಲಮಾಲಾಗಿ ಅತಿಥಿ ಗಳನ್ನು ಪರಿಚಯಿಸಿದರು.ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಸಮಸ್ತ ಬೋಧಕ,ಬೋಧಕೇತರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ವ್ಯಕ್ತಿತ್ವ ವಿಕಸನಕ್ಕೆ ಎನ್ . ಎಸ್.ಏಸ್. ಸಹಾಯಕಾರಿ




ರಾಯಾಪುರದಲ್ಲಿರುವ ಎಸ್. ಜೆ. ಎಮ್. ವಿ ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿಧ್ಯಾಲಯದಲ್ಲಿಂದು ಏನ್. ಎಸ್.ಎಸ್. ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿಧ್ಯಾಲಯದ ಪ್ರಾಚಾರ್ಯರಾದ ಡಾ. ಶಾಂತಯ್ಯ. ಕೆ. ಎಸ್. ಅವರು ಮಾತನಾಡುತ್ತಾ, ಏನ್. ಎಸ್. ಎಸ್. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ. ಸಮಾಜ ಸೇವೆ ಮಾಡಲು ತಮಗೊಂದು ಅವಕಾಶ. ಯುವಕರಲ್ಲಿ ಆದರ್ಶ ವ್ಯಕ್ತಿತ್ವದ ಗುಣಗಳನ್ನು ಹುಟ್ಟು ಹಾಕುತ್ತದೆ.ಗಾಂಧೀಜಿಯವರ ಕನಸಿನ ಕುಸಾದ ರಾಷ್ಟ್ರೀಯ ಸೇವಾ ಯೋಜನೆ ತಮ್ಮಲ್ಲಿ ಸಾಮಾಜಿಕ ಬದ್ಧತೆಯನ್ನು ಉಂಟು ಮಾಡುತ್ತದೆ.ತಾಳ್ಮೆ, ಸಹನೆ, ಶಿಸ್ತು, ನಾಯಕತ್ವ,ಸೇವೆ, ವ್ಯಕ್ತಿತ್ವ ವಿಕಸನದಂತಹ ಗುಣಗಳನ್ನು ಬೆಳೆಸುವಲ್ಲಿ ಏನ್. ಎಸ್. ಎಸ್ ಪ್ರಮುಖ ಪಾತ್ರ ವಹಿಸುತ್ತದೆ.ಎಲ್ಲ ವಿದ್ಯಾರ್ಥಿಗಳು ಏನ್. ಎಸ್. ಎಸ್. ಮೂಲಕ ಬೆಳೆಯಿರಿ. ತಮ್ಮ, ತಮ್ಮ ವ್ಯಕ್ತಿತ್ವ ರೂಪಿಸಿಕೋಳ್ಳಿ. ಎಂದರು.ಇದೆ ಸಂದರ್ಭದಲ್ಲಿ ಮಹಾವಿಧ್ಯಾಲಯದ ಉಪನ್ಯಾಸಕರಾದ ಚೇತನ ಬಾದಾಮಿ ಅವರಿಗೆ ಏನ್. ಎಸ್. ಎಸ್. ಜವಾಬ್ದಾರಿಯನ್ನು ವಹಿಸಲಾಯಿತು. ವಿದ್ಯಾರ್ಥಿಗಳಾದ ಮಧು ಹೊಸಳ್ಳಿ, ವಿಜಯಲಷ್ಮಿ ಗೌಡರ, ಸಂಗೀತಾ ಕಡಕೋಳ,ಹಾಗೂ ವೇದಾ ಕಾರ್ಯಕ್ರಮ ನಿರೂಪಿಸಿದರು

## ಅಂತರ ಕಾಲೇಜು ಮಟ್ಟದ ಚಿತ್ರ ಗೀತೆ ಹಾಗೂ ಜಾನಪದ ಗೀತೆಗಳ ಸ್ಪರ್ಧೆ



ಮಹಾವಿದ್ಯಾಲಯದಲ್ಲಿ ಸಾಂಸ್ಕೃತಿಕ ಘಟಕದ ಸಂಯೋಜಕರಾದ ಪ್ರೊ ಎಂ. ಬಿ ಅಳಗವಾಡಿಯವರು ಆಯೋಜಿಸಿದ್ದ ಅಂತರ್ ಕಾಲೇಜ್ ಮಟ್ಟದ ಚಿತ್ರ ಗೀತೆ ಹಾಗೂ ಜಾನಪದ ಗೀತೆಗಳ ಗಾಯನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳೊಂದಿಗೆ ನಿರ್ಣಾಯಕ ರಾದ ಶ್ರೀಮತಿ ಗಾಯತ್ರಿ ದೇಶಪಾಂಡೆ ,ಜ್ಯೋತಿ ಕಟ್ಲಾಸ್ಕಾರ್ ಹಾಗೂ ಪ್ರಾಚಾರ್ಯರಾದ ಡಾ . ಎಂ.ರಾಜಶೇಖರಪ್ಪ.

## ಸಾರ್ವಜನಿಕ ಸೇವಾ ಪ್ರಸಾರಕವಾಗಿ ದೂರದರ್ಶನ.

ಎಸ್. ಜೆ. ಎಮ್. ವಿ. ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯಮಹಾವಿಧ್ಯಾಲಯದಲ್ಲಿದು, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗ ದ ಸಂವಹನ ಕೂಟ ದಡಿಯಲ್ಲಿ ಸೆಪ್ಟೆಂಬರ್ 15,1959,ದೂರದರ್ಶನ.ಸ್ಥಾಪನೆ ಯಾದ ದಿನವನ್ನು,ಬಾರತದ ಪ್ರಸಾರ ಯುಗದ ಆರಂಭದ ದಿನವನ್ನಾ ಗಿ ಆಚರಿಸಲಾಯಿತು.





ಈ ಕಾರ್ಯಕ್ರಮದಲ್ಲಿ ಮಾತನಾಡಿ ದ ಮಹಾವಿಧ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಪ್ರೊ. ಜೆ. ಪಿ. ಯಂಡಿಗೇರಿಯವರು ಮಾತನಾಡುತ್ತಾ,ದೂರದರ್ಶನವು ಸೆಪ್ಟೆಂಬರ್ 15,1959ರಂದು ಸ್ಥಾಪನೆಯಾಯಿತು. ಇದನ್ನು ಬಾರತದ ಪ್ರಸಾರ ಯುಗದ ಆರಂಭವೆಂದೇ ಗುರುತಿಸಲಾಗಿದೆ .ದೂರದರ್ಶನ ವಿಂದು,ಭಾರತ ಸರಕಾರದ ಅಡಿಯಲ್ಲಿ ಸ್ವಾಯತ್ತ ಸಾರ್ವಜನಿಕ ಸೇವಾ ಪ್ರಸಾರಕವಾಗಿ, ಪ್ರಬಲ ಮಾಧ್ಯಮವಾಗಿ ಬೆಳೆದಿದೆ. ದೂರದರ್ಶನ,ಸಾರ್ವಜನಿಕ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ.ತಂತ್ರಜ್ಞಾನ ದ ಅಪ್ ಗ್ರೇಡ್ ದೊಂದಿಗೆ ಗುಣಮಟ್ಟದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ ಎನ್ನುತ್ತಾ, ಕಾರ್ಯ ಕ್ರಮದ ಔಚಿತ್ತತೆಯ ಕುರಿತು ಮಾತನಾಡಿದರು.ಅಧ್ಯಕ್ಷತೆ ವಹಿಸಿದ್ದ ಮಹಾವಿಧ್ಯಾಲಯದ ಪ್ರಾಚಾರ್ಯರಾದ ಡಾ. ಶಾಂತಯ್ಯ ಕೆ. ಎಸ್. ಅವರು ಮಾತಾನಾಡುತ್ತಾ, ಬಾರತದ ಪ್ರಸಾರ ಇತಿಹಾಸವನ್ನು ರೂಪಿಸುವಲ್ಲಿ ದೂರದರ್ಶನದ ಪಾತ್ರವನ್ನು ಶ್ಲಾಘೀಸುತ್ತಾ ದೂರದರ್ಶನ ವೊಂದು ಶಕ್ತಿಶಾ ಲಿ ಪ್ರಬಲ ಮಾಧ್ಯಮ. ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಯಲ್ಲಿ ದೂರದರ್ಶನ ದ ಪಾತ್ರ ಮಹತ್ವದ್ದು. ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಒಕ್ಕೂಟದ ಚೆರಮನ್ ರಾದ ಡಾ. ಪುಷ್ಪಾ ಬಸನಗೌಡರ. ಐ. ಕ್ಯೂ. ಎ. ಸಿ. ಸಂಯೋಜಕರಾದ ಸಿ. ಕೆ. ಹುಬ್ಬಳ್ಳಿ ಹಾಗೂ ಮಹಾವಿಧ್ಯಾಲಯದ ಪ್ರಾಧ್ಯಾಪಕ ಬಳಗ ಹಾಗೂ ಪತ್ರಿಕೋಧ್ಯಮ ವಿದ್ಯಾರ್ಥಿ ಗಳು ಉಪಸ್ಥಿತರಿದ್ದರು. ಕುಮಾರಿ ಸಂಗೀತಾ ಕಡಕೋಳ, ವಿಜಯಲಕ್ಷ್ಮೀ ಗೌಡರ, ನಾಗವೇಣಿ ಮೈಲೆರಿ ಕಾರ್ಯಕ್ರಮ ನಿರೂಪಿಸಿದರು.



.ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ನಿವೃತ್ತರಾದ ಡಾ.ಶಾಂತಯ್ಯ ಕೆ.ಏಸ್.ಅವರನ್ನು ಮಹಾವಿದ್ಯಾಲಯದದಿಂದ ಬೀಳ್ಕೊಟ್ಟ ಸಂದರ್ಭ.

## ವಿಧ್ಯಾರ್ಥಿ ಸಂಪಾದಕೀಯ



ಮಹಾವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಪ್ರಾಯೋಗಿಕ ಪತ್ರಿಕೆಯಾದ ಮಹಾಂತ ವಾಣಿ ತ್ರೈ ಮಾಸಿಕ ವಿದ್ಯಾರ್ಥಿಗಳಿಗೆ ಪತ್ರಿಕಾ ಮಾಧ್ಯಮದ ಕುರಿತು ಪ್ರಾಯೋಗಿಕ ತರಬೇತಿಯನ್ನು ನೀಡುತ್ತಿದೆ.ವೃತ್ತಿಯಾಧಾರಿತ ವಿಷಯವಾದ ಪತ್ರಿಕೋದ್ಯಮ ,ವಿದ್ಯಾರ್ಥಿಗಳಿಗೆ ಅವರ ವೃತ್ತಿ ಬದುಕನ್ನು ಕಟ್ಟಿಕೊಳ್ಳಲು ಸಹಾ ಯ ಮಾಡುತ್ತದೆ.

ಅಲ್ಲದೇ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಪ್ರೊ .ಜಯಲಕ್ಷ್ಮಿ ಮೇಡಂ ಅವರು , ವಿಧ್ಯಾರ್ಥಿಗಳಲ್ಲಿ ಪತ್ರಿಕೋದ್ಯಮದ ಹಾಗೂ ಸಮೂಹ ಸಂವಹನದ ಪರಿಚಯ ಮಾಡುವುದರ ಜೊತೆಗೆ ಪ್ರಾಯೋಗಿಕತೆಯತ್ತ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡು, ಪತ್ರಿಕೋದ್ಯಮ ವೃತ್ತಿ ಬದುಕನ್ನು ಕಟ್ಟಿಕೊಡುವತ್ತ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯವಾದದ್ದು. ಈ ಪ್ರಯತ್ನ ನಿರಂತರವಾಗಿರಲಿ ಎನ್ನುತ್ತಾ ಅವರ ಪ್ರಯತ್ನಕ್ಕೆ ಎಲ್ಲ ವಿದ್ಯಾರ್ಥಿಗಳ ಪರವಾಗಿ ಅಭಿನಂದನೆಗಳು.

(ಸತ್ಯ ದೃಷ್ಟಿ ಮಾಸ ಪತ್ರಿಕೆ )
ಸಂಪಾದಕರು
ಕುಮಾರ ಅಭಿಷೇಕ್ ಅಂಗಡಿ.

## ಮಹಾಂತ ಮಹಾವಿದ್ಯಾಲಯದಲ್ಲಿ ವಾಲ್ಮೀಕಿ ಜಯಂತಿ.



ರಾಯಾಪುರದಲ್ಲಿರುವ ಏಸ್ . ಜೆ. ಎಮ್. ವಿ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂದು ವಿಧ್ಯಾರ್ಥಿ ಒಕ್ಕೂಟ ಹಾಗೂ ಏನ್. ಏಸ್. ಏಸ್. ಘಟಕದ ಸಂಯುಕ್ತಾಶ್ರಯದಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು.

## ವಿಧ್ಯಾರ್ಥಿ ಗಳಿಗಿಂದು ಆದಾಯ ತೆರಿಗೆಯ ಮಾಹಿತಿ ಅತ್ಯವಶ್ಯ.



ಏಸ್. ಜೇ. ಎಂ.ವಿ .ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂದು ಐ ಕ್ಯೂ ಏ.ಸಿ.ಪ್ರಾಯೋಜಕತ್ವದಲ್ಲಿ ,ಮಹಾವಿದ್ಯಾಲಯದ ವಾಣಿಜ್ಯ ಶಾಸ್ತ್ರ ವಿಭಾಗ ಹಾಗೂ ಹುಬ್ಬಳ್ಳಿಯ ಆದಾಯ ತೆರಿಗೆ ವಿಭಾಗಗಳ ಸಂಯುಕ್ತಾಶ್ರಯದಲ್ಲಿ ಆದಾಯ ತೆರಿಗೆ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಹುಬ್ಬಳ್ಳಿಯ ಆದಾಯ ತೆರಿಗೆ ವಿಭಾಗದ ಡೆಪ್ಯುಟಿ ಕಮಿಷನರ ಶ್ರೀ. ಏನ.ಎಂ ಮಾದೇಶ್ ಅವರು ಮಾತನಾಡುತ್ತಾ, ಆದಾಯ ತೆರಿಗೆ ಅರ್ಥ, ಮಹತ್ವ ಹಾಗೂ ದೇಶದ ಅಭಿವೃದ್ಧಿಯಲ್ಲಿ ಆದಾಯ ತೆರಿಗೆಯ ಪಾತ್ರದ ಕುರಿತು ಮಾತನಾಡಿದರು,ಆದಾಯತೆರಿಗೆ ಯ ಪಕ್ಷಿನೋಟ ನೀಡುವುದರ ಜೊತೆಗೆ ಅದರ ಉಪಯೋಗಗಳನ್ನು ವಿವರಿಸಿದರು. ದೇಶದ ಭದ್ರತೆ ಯಲ್ಲಿ ಆದಾಯ ತೆರಿಗೆ ಬಳಕೆ ಯನ್ನೂ ವಿವರಿಸುತ್ತಾ,ಜನಸಾಮಾನ್ಯರ ಉತ್ತಮ ಬದುಕಿನ ನಿರ್ವಹಣೆಗೆ ಆದಾಯ ತೆರಿಗೆ ಬಳಕೆ ಕುರಿತು ಮಾತನಾಡುತ್ತಾ ದೇಶದ ಎಲ್ಲ ಪ್ರಜೆಗಳು ಆದಾಯ ತೆರಿಗೆ ಭರಿಸಿದ್ದೆ ಆದರೆ ದೇಶವನ್ನು ಅಭಿವೃದ್ಧಿ ಯತ್ತ ಮುನ್ನಡೆಸಲು ಸಾಧ್ಯವಾಗುತ್ತದೆ. ಪ್ರಾಮಾಣಿಕವಾಗಿ ಎಲ್ಲರೂ ಆದಾಯ ತೆರಿಗೆಯನ್ನು ಸರಕಾರಕ್ಕೆ ತುಂಬುವಂತೆ ಸಲಹೆ ನೀಡಿದರು.ಇದರಿಂದ ಕೃಷಿ,ಆರೋಗ್ಯ,ವೈದ್ಯಕೀಯ ಇಲಾಖೆ,ಡಿಫೆನ್ಸ್ ಮುಂತಾದ ಕ್ಷೇತ್ರದ ಅಭಿವೃದ್ಧಿಗೆ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ ಎಂದು ಆದಾಯ ತೆರಿಗೆಯ ಐತಿಹಾಸಿಕ ಬೆಳವಣಿಗೆಯನ್ನು ವಿವರಿಸಿದರು.ಆದಾಯ ತೆರಿಗೆ ಇಲಾಖೆಯ ಉದ್ಯೋಗಾವಕಾಶಗಳ ಕುರಿತು ಮಾತನಾಡುತ್ತಾ,ನಿರಂತರ ಅಧ್ಯಯನ ದೊಂದಿಗೆ ತೆರಿಗೆ ಇಲಾಖೆಯ ಉದ್ಯೋಗಾವಕಾಶಗಳ ಸದುಪಯೋಗ ಪಡಿಸಿಕೊಳ್ಳಿ ಎಂದರು.ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ . ಎಂ.ರಾಜಶೇಖರಪ್ಪ ಅವರು ಮಾತನಾಡುತ್ತಾ ಆದಾಯ ತೆರಿಗೆ ದೇಶದ ಅಭಿವೃದ್ಧಿಗೆ ಅಂದರೆ ರಾಷ್ಟ್ರದ ಸರ್ವತೋಮುಖ ಬೆಳವಣಿಗೆಗೆ ಉಪಯುಕ್ತವಾಗುತ್ತದೆ.ಇದೊಂದು ಅರ್ಥಪೂರ್ಣ ಕಾರ್ಯಕ್ರಮ.ಆದಾಯ ತೆರಿಗೆ ಸಮಾಜದ ಪ್ರಗತಿಗೆ,ಮುನ್ನಡೆಗೆ ಬಳಸುವಂತಹದು ಎಂದರು.

ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಆದಾಯ ತೆರಿಗೆ ಇಲಾಖೆಯ ಇನ್ಸಪೆಕ್ಟರ ಪ್ರವೀಣ್ ವಾಘಮೋರೆ, ಸುಖದೇವ್ ಕುಮಾರ್ ಮ್ಯಾಗೇರಿ ಹಾಗೂ ಐ ಕ್ಯೂ ಏ ಸಿ ಸಂಯೋಜಕರಾದ ಪ್ರೊ. ಸಿ.ಕೆ ಹುಬ್ಬಳ್ಳಿ.ವಾಣಿಜ್ಯವಿಭಾಗದ ಉಪನ್ಯಾಸಕರಾದ ಶ್ರೀಮತಿ ವಿದ್ಯಾ ಬಿದರಕುಂದಿ, ಶ್ರೀ ಕಿರಣ್ ಅಂಗಡಿ,ಶ್ರೀ ಚೇತನ ಬಾದಾಮಿ,ಶ್ರೀಮತಿ ದಿವ್ಯಶ್ರೀ ಉಪಸ್ಥಿತರಿದ್ದರು. ಕುಮಾರಿ ರಿತು ಪದ್ಮಣ್ಣವರ್ , ಕುಮಾರಿ ವೇದಾ ಬಟ್ಟುರ್, ಹಾಗೂ ಮಹಾಂತೇಶ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋದಕ್,ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿ ಗಳು ಉಪಸ್ಥಿತರಿದ್ದರು.



ವಾಯುಮಾಲಿನ್ಯ ನಿಯಂತ್ರಣ ಜಾಗೃತಿ ಮಾಸಾಚರಣೆ ನಿಮಿತ್ತ ಧಾರವಾಡ ಪ್ರಾದೇಶಿಕ ಉಪ ಸಾರಿಗೆ ಆಯುಕ್ತ ಕಛೇರಿಯವರು ಆಯೋಜಿಸಿದ್ದ ಬಾಷಣ,ಪ್ರಬಂಧ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ಮಹಾವಿದ್ಯಾಲಯದ ವಿಧ್ಯಾರ್ಥಿಗಳು.

## ಮಹಾತ್ಮರ ಜೀವನವೇ ನಮಗೆಲ್ಲಾ ಆದರ್ಶ.



ರಾಯಾಪುರದಲ್ಲಿರುವ ಎಸ್. ಜೆ. ಎಂ.ವಿ.ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿಂದು ರಾಷ್ಟಪಿತ ಮಹಾತ್ಮ ಗಾಂಧೀಜಿ ಯವರ 155 ಹಾಗೂ ಲಾಲ ಬಹದ್ದೂರ್ ಶಾಸ್ತ್ರಿ ಯವರ 120 ನೇಯ ಜಯಂತಿಯನ್ನು ಮಹಾವಿದ್ಯಾಲಯದ ಎನ್. ಏಸ್.ಏಸ್ ಹಾಗೂ ವಿದ್ಯಾರ್ಥಿ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಆಚರಿಸಲಾಯಿತು.



ರಾಯಾಪುರಾದಲ್ಲಿರುವ ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐ ಕ್ಯೂ ಎ ಸಿ ಹಾಗೂ ಜನಾದೇಶ ಸರಕಾರೇತರ ಸಂಘ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಕಾನೂನು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂಸ್ಥೆ ಸಾರ್ವತ್ರಿಕ ಕಾನೂನು ಅರಿವಿಗಾಗಿರುವ ಒಂದು ಆಂದೋಲನ.ಕಾರ್ಯಕ್ರಮದಲ್ಲಿ ಮಾತನಾಡಿದ ವಕೀಲರು ಹಾಗೂ ಜನಾದೇಶದ ಸಂಯೋಜಕರಾದ ಶ್ರೀಮತಿ ಸುಜಾತಾ ಸಾವಳಗಿಯವರು ಹೆಣ್ಣುಮಕ್ಕಳ ಆಸ್ತಿ ಕಾನೂನು ಕುರಿತು ಸವಿವರವಾಗಿ ಮಾತನಾಡಿದರು

## ಬೌದ್ಧಿಕ ಆಸ್ತಿ ಹಕ್ಕುಗಳ ಅರಿವು ಅತ್ಯಗತ್ಯ.



ರಾಯಾಪುರದಲ್ಲಿರುವ ಎಸ್. ಜೇ. ಎಂ. ವಿ.ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿಧ್ಯಾಲಯ ದಲ್ಲಿಂದು ಐ. ಕ್ಯೂ. ಎ. ಸಿ ಆಯೋಜಿಸಿದ 'ಬೌದ್ಧಿಕ ಆಸ್ತಿ ಹಕ್ಕು'ಗಳ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿ ಸಲಾಗಿತ್ತು.ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಧಾರವಾಡದ ಹುರಕಡ್ಲಿ ಅಜ್ಜ ಕಾನೂನು ಮಹಾವಿದ್ಯಾಲಯದ ಉಪನ್ಯಾಸಕರಾದ ಪ್ರೊ.ಅನಿತಾ ಕಾಗದ ಅವರು ಮಾತನಾಡುತ್ತಾ, ಬೌದ್ಧಿಕ ಆಸ್ತಿ ಹಕ್ಕು ವ್ಯಕ್ತಿ ಅಥವಾ ಮಾಲಿಕತ್ವದ ಅಮೂರ್ತ ಸ್ವತ್ತು. ಇದು ಕಾನೂನು ಬದ್ಧವಾದ ಹಕ್ಕು ಹಾಗೂ ಕಾನೂನಿನಿಂದ ರಕ್ಷಿಸಲ್ಪಡುತ್ತದೆ ಈ ಹಕ್ಕು ಭೌತಿಕವಲ್ಲದ ಆಸ್ತಿ. ಉದಾಹರಣೆಗಾಗಿ ಟ್ರೇಡ್ ಮಾರ್ಕ್, ಪೇಟೆಂಟ್ ಹಾಗೂ ಕಾಪಿ ರೈಟ್ ಒಳಗೊಂಡಂತೆ ಅನೇಕ ರೀತಿಯ ಸ್ವತ್ತುಗಳನ್ನು ಒಳಗೊಂಡಿದೆ. ಬೌದ್ಧಿಕ ಆಸ್ತಿಯನ್ನು ಹಿಡಿದಿಡಲು ಸಾಧ್ಯವಿಲ್ಲ. ಬೌದ್ಧಿಕ ಆಸ್ತಿ ಹಕ್ಕುಗಳು ಮಾನವನ ಬುದ್ಧಿಶಕ್ತಿಯನ್ನು ಒಳಗೊಂಡಿದೆ ಎನ್ನುತ್ತಾ ಬೌದ್ಧಿಕ ಆಸ್ತಿ ಹಕ್ಕು ಎಂದರೇನು? ಅದರ ಮಹತ್ವ ಜನ ಜೀವನದಲ್ಲಿ ಅದರ ಉಪಯುಕ್ತತೆ ಕುರಿತು ಸವಿವರವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ರಾಜಶೆ ಖರಪ್ಪ .ಎಂ .ಅವರು ಅಧ್ಯಕ್ಷೀಯ ನುಡಿಗಳನ್ನಾ ಡುತ್ತಾ, ಬೌದ್ಧಿಕ ಆಸ್ತಿ ಹಕ್ಕು ತಮ್ಮ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಸಹಾಯ ಮಾಡುತ್ತದೆ ಇದು ಎಲ್ಲ ರಂಗಗಳಲ್ಲಿ ಅತ್ಯಂತ ಉಪಯುಕ್ತವಾದದ್ದು. ಇದನ್ನು ಕೇವಲ ವೈಯಕ್ತಿಕವಾಗಿ ಮಾತ್ರ ಅಲ್ಲ, ಸಮಾಜದ ಅಭಿವೃದ್ಧಿಗೆ ಉಪಯೋಗಿಸಬೇಕು. ಭೌತಿಕ ಆಸ್ತಿ ಹಕ್ಕು ಪಿತ್ರಾರ್ಜಿತವಾಗಿ ಬಂದಿದ್ದಲ್ಲ ಇದು ಸ್ವಂತತೆ ಯಿಂದ ಬಂದದ್ದು. ಇದು ಸಾಧಿಸಿದ ಹಕ್ಕು. ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದದ್ದು.

# ಸಂಪಾದಕೀಯ



ನಮ್ಮ ಮಹಾವಿದ್ಯಾಲಯದ ಮುಖವಾಣಿಯಾಗಿ, “ಮಹಾಂತವಾಣಿ'' ತ್ರೈಮಾಸಿಕ ಮಾಸಿಕ ಪ್ರಕಟಣೆ, ಮಹಾವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆಯಾಗಿ ಕಳೆದ ಹತ್ತು ಹದಿನೈದು ವರ್ಷಗಳಿಂದ, ವಿದ್ಯಾರ್ಥಿಗಳಿಗೆ ಪತ್ರಿಕಾ ಬರಹಗಳ ಕುರಿತು ಪ್ರಾಯೋಗಿಕ.ಅನುಭವವನ್ನುನೀಡುತ್ತಿರುವ, ಸೃಜನಾತ್ಮಕತೆಯನ್ನು ಪರಿಚಯಿಸುತ್ತಿರುವ ಪತ್ರಿಕೆ. ಮಾಧ್ಯಮ ಕ್ಷೇತ್ರ ಇಂದು ಪ್ರಜಾಪ್ರಭುತ್ವದ ಅತಿ ಪ್ರಬಲ ಅಂಗವಾಗಿ ರೂಪಗೊಂಡಿರುವ ಸಂದರ್ಭದಲ್ಲಿ,ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆಯಾಗಿ ಮತ್ತು ಕಾಲೇಜಿನ ಶೈಕ್ಷಣಿಕ ವಲಯಕ್ಕೆ ಸಹಾಯ ಸೇತುವೆಯಾಗಿ ಮಹಾಂತ ವಾಣಿ ನಮ್ಮ ಮುಂದಿದೆ. ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನದ ಪ್ರಸ್ತುತ ಪಠ್ಯಕ್ರಮದೊಂದಿಗೆ ಪ್ರಾಯೋಗಿಕಬರಹಗಳು ನಮ್ಮ ವಿದ್ಯಾರ್ಥಿಗಳನ್ನು ಇನ್ನಷ್ಟು ಸನ್ನದ್ಧರನ್ನಾಗಿಸಲು ಪತ್ರಿಕೆ ಸಹಕಾರಿ. ಜೊತೆಗೆ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ತೋರ್ಪಡಿಸಲು ಇದೊಂದು ಸದವಕಾಶ. ಪತ್ರಿಕೋದ್ಯಮ ವಿಭಾಗದ ಬಹುನಿರೀಕ್ಷಿತ ಬೇಡಿಕೆಗಳನ್ನು ಈ ಪ್ರಕಟಣೆ ಈಡೇರಿಸಲಿದೆ. ಪತ್ರಿಕೆಗೆ ಬರೆಯಬೇಕೆನ್ನುವ ಪ್ರತಿಯೊಬ್ಬರು ಮುಕ್ತ ಮನಸ್ಸಿನಿಂದ ತಮ್ಮ ವಿಚಾರಗಳನ್ನು ಅಭಿವ್ಯಕ್ತಗೊಳಿಸಿ, ಮಹಾವಿದ್ಯಾಲಯದ ಧ್ವನಿಯಾಗಿ ಮಹಾಂತವಾಣಿ ವಿದ್ಯಾರ್ಥಿಗಳ ಪತ್ರಿಕೋದ್ಯಮ ವೃತ್ತಿ ಬದುಕನ್ನು ಕಟ್ಟಿಕೊಡುವಲ್ಲಿ ಸಹಾಯಕವಾಗಲಿ ಎಂಬುದೇ ನಮ್ಮೆಲ್ಲರ ಆಶಯ.ಪತ್ರಿಕೆ ಪ್ರಾರಂಭಿಸಲು ಅನುಮತಿಸಿದ ಸಂಸ್ಥೆಯ ಆಡಳಿತ ಮಂಡಳಿಗೂ,ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ರಾಜಶೇಖರಪ್ಪ.ಎಸ್.ಜೇ. ಎಂ ವಿ.ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ. ರಾಯಾಪೂರ.ದಾರವಾಡ ನನ್ನ ಎಲ್ಲ ಪ್ರಾಧ್ಯಾಪಕ ಮಿತ್ರರಿಗೂ, ಬೋಧಕೇತರ ಸಿಬ್ಬಂದಿಗೂ, ಪತ್ರಿಕೆಯ ಕೆಲಸದಲ್ಲಿ ಪ್ರೀತಿಯಿಂದ ತೊಡಗಿಸಿಕೊಂಡ ಎಲ್ಲ ವಿದ್ಯಾರ್ಥಿಗಳಿಗೂ ಅಭಿನಂದನೆಗಳು. **ಈ ಪ್ರಯತ್ನ ನಿರಂತರವಾಗಿ ಮುನ್ನಡೆಯಲಿ ಎಂಬ ಆಶಯ ನಮ್ಮದು**

**ಪ್ರೊ. ಜಯಲಕ್ಷ್ಮಿ ಯಂಡಿಗೇರಿ.**
ಮುಖ್ಯಸ್ಥರು, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗ.

# Best Wishes



I Congratulate the Head of the Department ofJournalism for bringing out the MAHANTHA VANI a Quarterly NEWS BULLETIN of SJMV Mahantha College, Rayapur, Dharwad.“It also gives me immense pleasure to state that, the department of journalism succeeded in publishing this periodical, which reveals the creative ability of the students through their articles, it also bespeaks the students co-curricular,extra curricular activities. The periodical proves to be the right platform for the students, who aspire to become journalists. It helps the students to improve writing skills, develop self confidence and express themselves freely through their writings.“I wish all the students a great success in their journey of Mahantha Vani.I sincerely thank Prof. J.P. Yandigeri for her great zeal and hard efforts in making this periodical a succes

**Dr. Rajasekharappa .M.**
**Principal**
SJMV Mahantha First Grade College of Arts and Commerce,
Rayapur, Dharwad.

## ಉದ್ಯೋಗ ಅವಕಾಶಗಳ ಅರಿವು ವಿಧ್ಯಾರ್ಥಿಗಳಿಗಿರಲಿ.




ರಾಯಾಪುರದಲ್ಲಿರುವ ಏಸ್. ಜೇ. ಎಂ. ವಿ.ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂದು ಐ ಕ್ಯೂ ಏ ಸಿ,ವಿಧ್ಯಾರ್ಥಿ ಓ ಕ್ಯೂಟ,ಸಾಧನಾ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಂಸ್ಥೆ ಹಾಗೂ ಮಾನವ ಹಕ್ಕುಗಳ ಕೇಂದ್ರ ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ ನಿಮಿತ್ತ ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಯುವಕರ ಪಾತ್ರದ ಕುರಿತುಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ನಾಟಕ ಸರ್ಕಾರ ಮಾನವ ಹಕ್ಕುಗಳ ಆಯೋಗದ ನಾಮ ನಿರ್ದೇಶಿತ ಸದಸ್ಯರು,ಸಾಧನಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯ ಸಂಸ್ಥಾಪಕರಾದ ಡಾ . ಇಸಾಬೆಲ್ ಜೇವಿಯರ ಅವರು ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಯುವಕರ ಪಾತ್ರದ ಕುರಿತು ಮಾತನಾಡುತ್ತಾ, ಪ್ರಸ್ತುತದಲ್ಲಿ ಯುವಕರಿಂದ ಮಾನವ ಹಕ್ಕುಗಳ ಕುರಿತು ಅರಿವು ಮೂಡಿಸಿಕೊಳ್ಳಿ,ಮಾನವ ಹಕ್ಕುಗಳ ಸಂರಕ್ಷಣೆ ಅತ್ಯಂತ ಅವಶ್ಯಕ.ಇಂದಿನ ದಿನಗಳಲ್ಲಿ ಆತ್ಮ ವಿಶ್ವಾಸ ,ಶ್ರದ್ಧೆ, ಕಠಿಣ ಶ್ರಮದಿಂದ ನಿಮ್ಮ ನಿಮ್ಮ ಜೀವನವನ್ನು ನೀವೇ ರೂಪಿಸಿಕೊಳ್ಳಿ ,ನಿಮ್ಮ ಭವಿಷ್ಯ ನೀವೇ ರೂಪಿಸಿಕೊಳ್ಳಿ.ಸಮಾಜ ಮುಖಿಗಳಾಗಿ ಬೆಳೆಯಿರಿ ಎಂದರು .ಪ್ರಭಾರಿ ಪ್ರಾಚಾರ್ಯರಾದ ಡಾ .ಪುಷ್ಪಾ ಬಸನಗೌಡರ ಅವರು ಮಾತನಾಡಿ ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆಯ ಪ್ರಸ್ತುತ ವರುಷದ ಘೋಷ ವಾಕ್ಯ ನಮ್ಮ ಹಕ್ಕುಗಳು ನಮ್ಮ ಭವಿಷ್ಯ ,ಇದನ್ನು ಅರ್ಥೈಸಿಕೊಳ್ಳಿ. ನಮ್ಮ ಹಕ್ಕುಗಳನ್ನು ರಕ್ಷಿಸುವ ಜವಾಬ್ದಾರಿ ನಮ್ಮದು.ಮಾನವ ಹಕ್ಕುಗಳ ಕುರಿತು ಜಾಗೃತಿ ಅತ್ಯವಶ್ಯ ಎಂದರು.ಇದೇ ಸಂದರ್ಭದಲ್ಲಿ ಧಾರವಾಡದ ಸಮರಸ ವೇದಿಕೆ,ವಿದ್ಯಾನಿಕೇತನ ಸಂಸ್ಥೆ ಧಾರವಾಡ ಆಯೋಜಿಸಿದ್ದ 75ನೆಯ ಸಂವಿದಾನ ದಿನಾಚರಣೆಯ ನಿಮಿತ್ತ ಆಯೋಜಿಸಿದ್ದ ರಾಷ್ಟ್ರೀಯ ಭಾವೈಕ್ಯತೆ ಕುರಿತಾದ ಪ್ರಬಂಧ,ಪೋಸ್ಟರ್ ಮೇಕಿಂಗ್ ಮತ್ತು ರೀಲ್ಸ್ ತಯಾರಿಸುವ ಸ್ಪರ್ಧೆಯಲ್ಲಿ ರಿಲ್ಸ್ ಮೇಕಿಂಗ್ ನಲ್ಲಿ ಮಹಾವಿದ್ಯಾಲಯದ ಕುಮಾರಿ ಅಪೂರ್ವ ತಳವಾರ ಪ್ರಥಮ ಸ್ಥಾನ, ಇತರ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

## ಮಾನವ ಹಕ್ಕುಗಳ ಸಂರಕ್ಷಣೆ ಅತ್ಯವಶ್ಯ.ಶ್ರೀಮತಿ ಇಸಾಬೆಲ್ಲಾ ಜೇವಿಯರ್.




ರಾಯಾಪುರದಲ್ಲಿರುವ ಏಸ್. ಜೇ. ಎಂ. ವಿ.ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂದು ಐ ಕ್ಯೂ ಏ ಸಿ,ವಿಧ್ಯಾರ್ಥಿ ಓ ಕ್ಯೂಟ,ಸಾಧನಾ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಂಸ್ಥೆ ಹಾಗೂ ಮಾನವ ಹಕ್ಕುಗಳ ಕೇಂದ್ರ ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ ನಿಮಿತ್ತ ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಯುವಕರ ಪಾತ್ರದ ಕುರಿತುಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ನಾಟಕ ಸರ್ಕಾರ ಮಾನವ ಹಕ್ಕುಗಳ ಆಯೋಗದ ನಾಮನಿರ್ದೇಶಿತ ಸದಸ್ಯರು,ಸಾಧನಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆಯ ಸಂಸ್ಥಾಪಕರಾದ ಡಾ . ಇಸಾಬೆಲ್ ಜೇವಿಯರ ಅವರು ಮಾನವ ಹಕ್ಕುಗಳ ಸಂರಕ್ಷಣೆಯಲ್ಲಿ ಯುವಕರ ಪಾತ್ರದ ಕುರಿತು ಮಾತನಾಡುತ್ತಾ, ಪ್ರಸ್ತುತದಲ್ಲಿ ಯುವಕರಿಂದ ಮಾನವ ಹಕ್ಕುಗಳ ಕುರಿತು ಅರಿವು ಮೂಡಿಸಿಕೊಳ್ಳಿ,ಮಾನವ ಹಕ್ಕುಗಳ ಸಂರಕ್ಷಣೆ ಅತ್ಯಂತ ಅವಶ್ಯಕ.ಪ್ರಭಾರಿ ಪ್ರಾಚಾರ್ಯರಾದ ಡಾ .ಪುಷ್ಪಾ ಬಸನಗೌಡರ ಅವರು ಅಧ್ಯಕ್ಷತೆ ವಹಿಸಿದ್ದರು.ಇದೇ ಸಂದರ್ಭದಲ್ಲಿ ಧಾರವಾಡದ ಸಮರಸ ವೇದಿಕೆ,ವಿದ್ಯಾನಿಕೇತನ ಸಂಸ್ಥೆ ಧಾರವಾಡ ಆಯೋಜಿಸಿದ್ದ 75ನೆಯ ಸಂವಿದಾನ ದಿನಾಚರಣೆಯ ನಿಮಿತ್ತ ಆಯೋಜಿಸಿದ್ದ ರಾಷ್ಟ್ರೀಯ ಭಾವೈಕ್ಯತೆ ಕುರಿತಾದ ಪ್ರಬಂಧ,ಪೋಸ್ಟರ್ ಮೇಕಿಂಗ್ ಮತ್ತು ರೀಲ್ಸ್ ತಯಾರಿಸುವ ಸ್ಪರ್ಧೆಯಲ್ಲಿ ರಿಲ್ಸ್ ಮೇಕಿಂಗ್ ನಲ್ಲಿ ಮಹಾವಿದ್ಯಾಲಯದ ಕುಮಾರಿ ಅಪೂರ್ವ ತಳವಾರ ಪ್ರಥಮ ಸ್ಥಾನ, ಇತರ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

## ಮಾಧ್ಯಮ ವಿದ್ಯಾರ್ಥಿಗಳಿಗೆ ಪತ್ರಿಕಾ ನೀತಿ ಸಂಹಿತೆ ಅರಿವು ಅತ್ಯವಶ್ಯ.




ರಾಯಪೂರದಲ್ಲಿರುವ ಎಸ್ .ಜೇ ಎಮ್. ವಿ ಮಹಾಂತ ಪ್ರಥಮ ದರ್ಜೆ ಕಲಾ ಹಾಗೂ ವಾಣಿಜ್ಯಮಹಾವಿದ್ಯಾಲಯದಲ್ಲಿಂದು ಐ.ಕ್ಯೂ .ಎ.ಸಿ .ಹಾಗೂ ಪತ್ರಿಕೋದ್ಯಮ ವಿಭಾಗದ ಸಂಯುಕ್ತಾಶ್ರಯದಲ್ಲಿ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಿಗಾಗಿ ಪತ್ರಿಕೋದ್ಯಮದಲ್ಲಿಯ ನೀತಿ ಸಂಹಿತೆ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ಗದಗ ಕೆ.ಎಲ್. ಈ.ಜಗದ್ಗುರು ತೋಂಟದಾರ್ಯ ಪದವಿ ಮಹಾವಿದ್ಯಾಲಯದ ಪತ್ರಿಕೋದ್ಯಮ ಉಪನ್ಯಾಸಕರಾದ ಶ್ರೀ ಮಲ್ಲನಗೌಡ ಚಿನ್ನಪ್ಪಗೌಡರವರು ಮಾತನಾಡುತ್ತಾ, ವಿದ್ಯಾರ್ಥಿಗ ಳಿಂದು ಪತ್ರಿಕೋದ್ಯಮದತ್ತ ಆಸಕ್ತಿ ವಹಿಸಿ, ಪತ್ರಿಕೋದ್ಯಮ ವೃತ್ತಿ ಬದುಕನ್ನು ಕಟ್ಟಿಕೊಳ್ಳುವತ್ತ ಗಮನ ಹರಿಸಿ.ಓದು ಬರಹ ತಮ್ಮಹವ್ಯಾಸವಾಗಲಿ. ಸಂವಹನ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಪತ್ರಿಕೋದ್ಯಮದ ನೀತಿ ಸಂಹಿತೆಯ ಕುರಿತು ಅರಿವಿರಲಿ. ಮಾಧ್ಯಮ ವೃತ್ತಿ ಬದುಕನ್ನು ಆಯ್ದುಕೊಂಡ ಸಂದರ್ಭದಲ್ಲಿ ಪತ್ರಿಕೋದ್ಯಮದ ನೀತಿ ಸಂಹಿತೆಗಳು ತಮಗೆ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಸಹಾಯ ಮಾಡುತ್ತವೆ. ಪತ್ರಿಕೆಗಳನ್ನು ಓದುವುದನ್ನು ರೂಢಿಸಿಕೊಳ್ಳಿ. ಪತ್ರಿಕೋದ್ಯಮ ತಮಗೆ ಜ್ಞಾನದ ಹರುವನ್ನು ಹೆಚ್ಚಿಸುತ್ತದೆ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತಾವು ಯಶಸ್ವಿಯಾಗಲು ಕಾರಣವಾಗುತ್ತದೆ. ಪತ್ರಿಕೋದ್ಯಮದಲ್ಲಿಯ ವಿಪುಲವಾದಂತಹ ವೃತ್ತಿಪರ ಅವಕಾಶಗಳ ಕುರಿತು ತಿಳಿದುಕೊಳ್ಳಿ ,ಅದರತ್ತ ತಮ್ಮ ಪ್ರಯತ್ನವಿರಲಿ. ಸೃಜನಶೀಲ ಮನಸ್ಸು ತಮ್ಮದಾಗಲಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಅಧ್ಯಕ್ಷತೆ ನುಡಿಗಳನ್ನಾಡಿದ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ . ಪುಷ್ಪಾ ಬಸನಗೌಡರ ಅವರು ಪತ್ರಿಕೋದ್ಯಮದ ನೀತಿಯ ಜೊತೆಗೆ, ಜೀವನದ ನೀತಿ ಸಂಹಿತೆಯನ್ನು ಅರ್ಥೈಸಿಕೊಳ್ಳಿ. ತಮ್ಮಲ್ಲಿ ಆತ್ಮವಿಶ್ವಾಸವಿರಲಿ. ಶಿಸ್ತು ಬದ್ಧ ಜೀವನದಿಂದ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದರು.

ಆರಂಭದಲ್ಲಿ ಮಾತನಾಡಿದ ಮಹಾವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಪ್ರೊ. ಜಯಲಕ್ಷ್ಮಿ ಯೆಂಡಿಗೇರಿ ಅವರು ಪತ್ರಿಕೋದ್ಯಮ ಒಂದು ವಿಸ್ತಾರವಾದಂತ ಕ್ಷೇತ್ರ. ಪ್ರಜಾಪ್ರಭುತ್ವ ದ ಯಶಸ್ಸಿಗೆ ಮೂಲ ಕಾರಣವಾದಂತಹ ಪತ್ರಿಕಾ ಕ್ಷೇತ್ರದ ಬಗ್ಗೆ ತಮಗೆ ಅರಿವಿರಲಿ. ಪತ್ರಿಕೋದ್ಯಮದ ವೃತ್ತಿ ಬದುಕನ್ನು ಆಯ್ದುಕೊಳ್ಳುವಂತಹ ತಾವು ಓದು ಬರವಣಿಗೆಯೊಂದಿಗೆ ಸೃ ಜನಾತ್ಮಕತೆಯನ್ನು ರೂಡಿಸಿಕೊಂಡು ಪತ್ರಿಕೋದ್ಯಮದ ಕಾನೂನುಗಳನ್ನು ಸಹ ತಿಳಿದುಕೊಳ್ಳುವುದು ಅತ್ಯವಶ್ಯ ಎಂದರು. ವೇದಿಕೆಯಲ್ಲಿ ಐ.ಕ್ಯೂ .ಎ.ಸಿ. ಸಂಯೋಜಕರಾದ ಪ್ರೊಫೆಸರ್ ಸಿ .ಕೆ ಹುಬ್ಬಳ್ಳಿ, ಭೂಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ . ಎಂ.ಜಿ ಬಾಗೇವಾಡಿ ಹಾಗೂ ಮಹಾವಿದ್ಯಾಲಯದ ಪ್ರಾಧ್ಯಾಪಕ ಬಳಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ನವೆಂಬರ್ 1 ರಂದು ನಗರದ ಆರ್ ಎನ್ ಶೆಟ್ಟಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಧಾರವಾಡದು ಉಸ್ತುವಾರಿ ಸಚಿವರಾದಂತಹ ಶ್ರೀ ಸಂತೋಷ್ ಲಾಡ್ ಅವರೊಂದಿಗೆ ಮಹಾವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಬೋಧಕೇತರ ಸಿಬ್ಬಂದಿ ಬಳಗ



ಧಾರವಾಡದ ಕಾಲೇಜು ಶಿಕ್ಷಣ ಇಲಾಖೆಯ ಜಂಟಿನಿರ್ದೇ ಶಕರಾದ ಪ್ರೊ ಶ್ರೀ ಪ್ರಕಾಶ್ ಹೊಸಮನಿ ಯಾವರು ಮಹಾವಿದ್ಯಾಲಯಕ್ಕೆ ಬೇಟಿ ನೀಡಿದ ಸಂದರ್ಭ



ಮಹಾವಿದ್ಯಾಲಯದ ಕಲಾ ವಿಭಾಗದ ವಿದ್ಯಾರ್ಥಿಗಳಾದ ಸಚಿನ ಧಾಭಿಮತ್ ಹಾಗೂ ಬಾಳು ನಂದಿ ಇವರು ಖೋಖೋ ಕ್ರೀಡೆಯಲ್ಲಿ ಶೈಕ್ಷಣಿಕ ವರ್ಷ 2024ರ ಕರ್ನಾಟಕ ವಿಶ್ವವಿದ್ಯಾಲಯದ ಬ್ಲ್ಯೂ ಆಗಿ ಆಯ್ಕೆಯಾಗಿದ್ದಾರೆ.




ವಿಶ್ವ ಶಾಂತಿ ಯನ್ನು ಉತ್ತೇಜಿಸಲು ನಡೆದಂತ ವಾಕಥಾನ್ ನಲ್ಲಿ ಪಾಲ್ಗೊಂಡ ಮಹಾವಿದ್ಯಾಲಯದ ರೆಡ್ ಕ್ರಾಸ್ ಘಟಕದ ಸಂಯೋಜಕರಾದ ಪ್ರೊ ಜಿ ಸಿ ಕಡ್ಡಿಪುಡಿ ಹಾಗೂ ವಿದ್ಯಾರ್ಥಿಗಳು.




ಜಿಲ್ಲಾಡಳಿತ ಆಯೋಜಿಸಿದ್ದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಪ್ರಯುಕ್ತ ರಾಜ್ಯಾದ್ಯಂತ ಹಮ್ಮಿಕೊಂಡಂತಹ ಬೃಹತ್ ಮಾನವ ಸರಪಳಿ ನಿರ್ಮಾಣ ಕಾರ್ಯಕ್ರಮದಲ್ಲಿ ಮಹಾಂತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಶಾಂತ ಯ್ಯ ಕೆ ಎಸ್ ಹಾಗೂ ಪ್ರಾಧ್ಯಾಪಕರು ,ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು



ಎನ್ಎಸ್ಎಸ್ ಘಟಕದ ವತಿಯಿಂದ ಮಹಾವಿದ್ಯಾಲಯದಲ್ಲಿ ಎನ್ಎಸ್ಎಸ್ ಕಾರ್ಯಕ್ರಮ ಅಧಿಕಾರಿಯಾದ ಡಾ .ತೇಜಸ್ವಿನಿ ಅವರೊಂದಿಗೆ ವಿದ್ಯಾರ್ಥಿಗಳು ಮಹಾವಿದ್ಯಾಲಯದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡಿದ್ದರು



ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಪಾತ್ರಿಕಾ ದಿ ನಾಚಾರಣೆಯಲ್ಲಿ ಪ್ರಾಚಾರ್ಯರಾದ ಡಾ.ರಾಜಶೇಖರಪ್ಪ ಎಂ,ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಪ್ರೊ .ಜೇ. ಪಿ. ಎಂಡಿಗೇರಿ ಅವರೊಂದಿಗೆ ವಿಧ್ಯಾರ್ಥಿ ಗಳು ಪಾಲ್ಗೊಂಡ ಗಳಿಗೆ




2024 ಪ್ರಸಕ್ತ ವರುಷದಲ್ಲಿ ಮಹಾವಿದ್ಯಾಲಯಕ್ಕೆ ಪ್ರವೇಶ ಪಡೆದ ಬಿಎ ಹಾಗೂ ಬಿಕಾಂ ಮೊದಲನೇ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಪುನರ್ಮನ ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಡಾ.ಶಾಂತಯ್ಯ ಕೆ ಎಸ್ ಮಾತನಾಡುತ್ತಿರುವುದು



ಮಹಾವಿದ್ಯಾಲಯದಲ್ಲಿ ವಾಯು ಮಾಲಿನ್ಯ ನಿಯಂತ್ರಣ ಜಾಗೃತಿ ಮಾಸಾಚರಣೆ ಕಾರ್ಯಕ್ರಮ.ಆಚರಿಸಲಾಯಿತು




ಮಹಾವಿದ್ಯಾಲಯದ ಐ ಕ್ಯೂ ಎ ಸಿ ಅಡಿಯಲ್ಲಿ ಸಮಾಜಶಾಸ್ತ್ರ ಹಾಗೂ ಅರ್ಥಶಾಸ್ತ್ರ ವಿಭಾಗಗಳ ಸಂಯುಕ್ತ ಆಶ್ರಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಬಳಸುವ ತಂತ್ರಗಳ ಕುರಿತು ಒಂದು ದಿನದ ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ವೀರಾಂಡ ರೇಸ್ ಮ್ಯಾನೇಜರ್ ಆದಂತಹ ಶ್ರೀ ಅರುಣ್ ಕುಮಾರ್ ಅವರು ಮಾತನಾಡುತ್ತಿರುವುದು.




ಮಹಾವಿದ್ಯಾಲಯದ ವಾಣಿಜ್ಯ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕ ರೊಂದಿಗೆ ಹುಬ್ಬಳ್ಳಿಯ ಪಾರ್ಲೆ- ಜಿ ಬಿಸ್ಕೆಟ್ ಫ್ಯಾಕ್ಟರಿಗೆ.ಬೇಟಿ ನೀಡಿದ ಸಂದರ್ಭ.




ರಾಯಾಪುರದಲ್ಲಿರುವ ಮಹಾಂತ ಪ್ರಥಮ ದರ್ಜೆ ಕಾಲೇಜಿನಲ್ಲಿಂದುಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ, ಸಂವಹನ ಕೂಟದ ಆಶ್ರಯದಲ್ಲಿ ವಿಶ್ವ ಸುದ್ದಿ ದಿನವನ್ನು ಆಚರಿಸಲಾಯಿತು.

ಪ್ರಧಾನ ಸಂಪಾದಕರು ಡಾ.ರಾಜಶೇಖರಪ್ಪ .ಎಂ. ಸಂಪಾದಕರು : ಪ್ರೊ ಜಯಲಕ್ಷ್ಮಿ ಯಂಡಿಗೇರಿ ವಿಧ್ಯಾರ್ಥಿ ಸಹ ಸಂಪಾದಕ ಕುಮಾರ ಅಭಿಷೇಕ್ ಅಂಗಡಿ ,
ಸಂಗೀತಾ ಕಡಕೋಳ,ವಿಜಯಲಕ್ಷ್ಮಿ ಗೌಡರ,ಸಿದ್ಧಲಿಂಗ,ಕಾರ್ತಿಕ್,ಭಾಗ್ಯಶ್ರೀ,ಕೀರ್ತಿ,ಪೂಜಾ ಕುರುಬೆಟ್ಟ, ಮೈಲಾರ ಗೌಡ ಜಾನಗೌಡರ, ಮುದ್ರಕರು :ಮನೋಹರ ಮುದ್ರಣಾಲಯ ಧಾರವಾಡ ಮೊ : 9141201170